ಶ್ರೀ ಚಂದ್ರಕಾಂತ್ ಬೆಲ್ಲದ್: ಮಹತ್ವ ಕೊಟ್ಟು ಮುಂದಿನ ವರ್ಷ ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ರಾಜ್ಯ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ತಾಲ್ಲೂಕಿನಲ್ಲಿ ವಾಹನ ಮತ್ತು ವಾಹನ ಚಾಲಕರ ಕುರಿತು.

588: (4145)

ಎಂ.ಎನ್.ನಾರಾಯಣಸ್ವಾಮಿ (ಬೇತಮಂಗಲ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ತಾಲ್ಲೂಕು ಕೇಂದ್ರಗಳ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರ ವಾಹನಗಳ ಸಂಖ್ಯೆ ಎಷ್ಟು?

ಆ) ಒದಗಿಸಿರುವ ಸದರಿ ವಾಹನಗಳಿಗೆ ಚಾಲಕರ ಕೊರತೆ ಇದೆಯೇ? ಇದ್ದಲ್ಲಿ ಆ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವರೇ?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಜ್ಯದ ತಾಲ್ಲೂಕು ಕೇಂದ್ರಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಾಹನ ಸಂಖ್ಯೆ: 647 ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ವಾಹನ ಸಂಖ್ಯೆ: 19.

ಆ) ರಾಜ್ಯದ ತಾಲ್ಲೂಕು ಕೇಂದ್ರಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಒದಗಿಸಿರುವ ವಾಹನಗಳಿಗೆ ಸ್ವಲ್ಪಮಟ್ಟಿಗೆ ಚಾಲಕರ ಕೊರತೆ ಇದೆ. ರೋಗಿಗಳಿಗೆ ತೊಂದರೆಯಾಗದಂತೆ ಕೊರತೆ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿರುವ ವಾಹನಗಳಿಗೆ ಬದಲಿ ವ್ಯವಸ್ಥೆಯ ಮೇಲೆ ಚಾಲಕರನ್ನು ನೇಮಿಸಲಾಗಿದೆ. ಕೊರತೆಯನ್ನು ನೀಗಿಸಲು ವಾಹನ ಚಾಲಕರ ನೇಮಕಾತಿಗಾಗಿ ಸರ್ಕಾರದ ಅನುಮತಿ ಸಿಕ್ಕಿದ್ದು ನೇಮಕಾತಿ ಕ್ರಮ ಪ್ರಗತಿಯಲ್ಲಿದ್ದು ತ್ವರಿತವಾಗಿ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಂಜೂರಾದ 254 ವಾಹನ ಚಾಲಕರ ನೇಮಕಾತಿ ಆದೇಶ ಇಷ್ಟರಲ್ಲಿ ಹೊರಡಿಸಲಾಗುವುದು.

ಶ್ರೀ ಎಂ.ಎನ್.ನಾರಾಯಣಸ್ವಾಮಿ: ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ

ಕೇಂದ್ರಗಳಲ್ಲಿ ಎಷ್ಟು ವಾಹನಗಳನ್ನು ಒದಗಿಸಿಕೊಟ್ಟಿದ್ದಾರೆ. ಆ ವಾಹನಕ್ಕೆ ಎಷ್ಟು ಜನ ಚಾಲಕರು ಇದ್ದಾರೆ ಎಂಬ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಆರೋಗ್ಯ ಕೇಂದ್ರಗಳ ವಾಹನ ಸಂಖ್ಯೆ: 647 ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಸ್ಪಷ್ಟವಾದ ಉತ್ತರ ಇಲ್ಲ. ಸ್ವಲ್ಪ ಮಟ್ಟಿಗೆ ಚಾಲಕರ ಕೊರತೆ ಇದೆ ಎಂದು ಹೇಳಿದ್ದಾರೆ. ಸ್ವಲ್ಪಮಟ್ಟಿಗೆ ಎಂದು ಹೇಳುವುದರ ಜೊತೆಗೆ 254 ಚಾಲಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಂಡಿದ್ದೇವೆ, ಎಂದು ಹೇಳಿದ್ದಾರೆ. ಆ ತರಹ ಅವಶ್ಯಕತೆ ಬಗ್ಗೆ ತಮಗೆ ಮನವರಿಕೆ ಮಾಡಿಕೊಡುವುದಕ್ಕೆ ನಾನು ಇಚ್ಛಿಪಡುತ್ತೇನೆ. ಗ್ರಾಮೀಣ ಮಟ್ಟದಲ್ಲಿ ಬಡತನ ರೇಖೆಗಿಂತ ಹೆಚ್ಚು ಜನ ವಾಸವಾಗಿದ್ದಾರೆ. ಮಾತೆಯರು ಅಪಘಾತ ಸಮಯದಲ್ಲಿ ಮತ್ತು ಪ್ರಸವಕ್ಕೆ ಬಂದಾಗ ಬಹುತೇಕ ಕಡೆ ವಾಹನಗಳು ಇದೆ, ಚಾಲಕರು ಇಲ್ಲ. ಅವರು ಯಾರನ್ನು ಅವಲಂಬಿಸಬೇಕಾಗಿದೆ? ಇದಕ್ಕೆ ಸ್ಪಷ್ಟವಾದ ಉತ್ತರ ಬೇಕಾಗಿದೆ. ತಾವು ಬದಲಿ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಯಾವುದೇ ಬದಲಿ ವ್ಯವಸ್ಥೆ ಆಗಲಿ. ಬದಲಿ ವ್ಯವಸ್ಥೆ ಎಂದು ಏನು ಮಾಡಿದ್ದೀರಾ?

ಡಾ: ಎಚ್.ಸಿ.ಮಹದೇವಪ್ಪ: ಸನ್ಮಾನ್ಯ ಉಪಾಧ್ಯಕ್ಷರೆ, ವಾಹನಗಳ ಚಾಲಕರ ಹುದ್ದೆಗಳ ಅಭಾವ ಇರುವುದು ನಿಜ. ಈಗಾಗಲೇ ರಾಜ್ಯ ಸರ್ಕಾರದ ಮತಿಯಿಂದ 400 ಚಾಲಕರ ನೇಮಕ ಮಾಡುವುದಕ್ಕೆ ಹಣಕಾಸು ಇಲಾಖೆಯ ಅನುಮತಿ ದೊರೆತಿದೆ. ಅರ್ಜಿಗಳನ್ನು ಕರೆದಿದ್ದೇವೆ. ರಿಕ್ರೂಟ್‌ಮೆಂಟ್ ಮಾಡುವಂತಹದು ಪ್ರಗತಿಯ ಹಂತದಲ್ಲಿದೆ. ಆದಷ್ಟು ಜಾಗ್ರತೆ ಮಾಡುತ್ತಿದ್ದೇವೆ. ಈಗಾಗಲೇ ನಾಶ್ಕ ಕರ್ನಾಟಕ ಹೆಲ್ತ್ ಸಿಸ್ಟಂ ಡೆವಲಪ್‌ಮೆಂಟ್ ಕೆಳಗಡೆ ಸುಮಾರು 254 ಡ್ರೈವರ್ ಹುದ್ದೆಗಳನ್ನು ತುಂಬತಕ್ಕ ಪ್ರಕ್ರಿಯೆ ನಡೆದಿದೆ. ಇನ್ನು ಹತ್ತು-ಹದಿನೈದು ಈ ಆಕ್ಷೇಪಣೆಯನ್ನು ಹೊರಡಿಸುತ್ತಿದ್ದೇವೆ. ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸೀಮಿತವಾಗಿ ಸಮಸ್ಯೆ ಇದ್ದರೆ ಅದನ್ನು ಬಗೆಹರಿಸಲಿಕ್ಕೆ ಅವರ ಜೊತೆ ಚರ್ಚೆ ಮಾಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಉಪಾಧ್ಯಕ್ಷರು: ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಿಮ್ಮ ಜೊತೆ ಚರ್ಚೆ ಮಾಡಿ ಸಮಸ್ಯೆ ಬಗೆಹರಿಸಲು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರಲ್ಲಾ.

ಶ್ರೀ ಎಂ.ಎನ್.ನಾರಾಯಣಸ್ವಾಮಿ: ಎರಡು ವರ್ಷದಿಂದ ವಾಹನ ಚಾಲಕರು ಇಲ್ಲ. ಕೋಟ್ಯಾಂತರ ರೂಪಾಯಿ ಹಣ ವೆಚ್ಚ ಮಾಡಿ ಸಾರ್ವಜನಿಕರ ಹಣ ದುರುಪಯೋಗ ಆಗುತ್ತದೆ ಎಂದಲ್ಲ. ವೆಚ್ಚ ಮಾಡಿದ್ದೇವೆ. ಚಾಲಕರನ್ನು ಕೊಡಲಿಲ್ಲ ಎಂದರೆ ಕೋಟ್ಯಾಂತರ ಹಣವನ್ನು ನೀವು ಎಲ್ಲಿ ವೆಚ್ಚ ಮಾಡಿದ್ದೀರಿ? ಬಹುಶಃ ಅದರ ಬಗ್ಗೆ ಎಚ್ಚರಿಕೆಯನ್ನು ನಿರ್ವಹಿಸಬೇಕಾಗಿದೆ. ಚಾಲಕರು ಇಲ್ಲದೇ ವಾಹನಗಳನ್ನು ಒದಗಿಸುವುದರಲ್ಲಿ ಅರ್ಥಹೀನ. ಅದರ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಮಾಡುವಂತಹ ಮನೋಭಾವ ಇದೆ ಎಂದು ನನ್ನ ಭಾವನೆ. ಯಾವಾಗ ಒದಗಿಸಿಕೊಡುತ್ತೀರಿ? ನನ್ನ ಕ್ಷೇತ್ರದಲ್ಲಿ ಮೂರು ವರ್ಷದಿಂದ ಚಾಲಕರು ಇಲ್ಲ.

ಡಾ: ಎಚ್.ಸಿ.ಮಹದೇವಪ್ಪ: ಮಾನ್ಯ ಉಪಾಧ್ಯಕ್ಷರೇ, ನಾನು ಈಗಾಗಲೇ ಹೇಳಿದ್ದೇನೆ. ನೇಮಕಾತಿ ಮಾಡುವುದಕ್ಕೆ ಕಾನೂನು ಇದೆ. ಕಾನೂನಿನ ಚೌಕಟ್ಟಿನಲ್ಲಿ ನೇಮಕ ಮಾಡಲಿಕ್ಕೆ ಸಮಯ ಆಗುತ್ತದೆ. ಆ ಕಾರಣಕ್ಕೇನೇ ಈ ತುರ್ತು ಅಗತ್ಯವನ್ನು ಮನಗಂಡು ಸಚಿವ ಸಂಪುಟದ ಸಭೆಯಲ್ಲಿ ವಿಶ್ವ ಬ್ಯಾಂಕಿನ ನೆರವಿನಡಿಯಲ್ಲಿ ಬರತಕ್ಕ ಸುಮಾರು ನಾಲ್ಕೂವರೆ ಸಾವಿರ ಹುದ್ದೆಗಳನ್ನು outside the purview of the KPSC, one time measure ನೇರವಾಗಿ ತುಂಬಲಿಕ್ಕೆ ಸಚಿವ ಸಂಪುಟ ಅನುಮತಿ ಕೊಟ್ಟಿದೆ. ರಾಜ್ಯ ಸರ್ಕಾರದ ವತಿಯಿಂದ 400 ಚಾಲಕರ ಹುದ್ದೆಗಳನ್ನು ತುಂಬಲು ಈಗಾಗಲೇ ಹಣಕಾಸು ಇಲಾಖೆ ಪರವಾನಿಗಿ ಕೊಟ್ಟಿರುವುದರಿಂದ ಆದಷ್ಟು ಜಾಗ್ರತೆ ನಾವು ತುಂಬಲು ಪ್ರಯತ್ನ ಮಾಡುತ್ತಿದ್ದೇವೆ. ಅವರ ಸಮಸ್ಯೆಗಳು ಲೋಕಲ್ ಆಗಿ ಎಲ್ಲಾದರೂ ತುರ್ತಾಗಿ ಇದ್ದರೆ ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ರಿಸರ್ವ್ ಕಾನ್‌ಸ್ಟಿಟೂಯೆನ್ಸಿಯಿಂದ ಬಂದಂತಹವರು. ಅವರೇನು ಹೇಳುತ್ತಿದ್ದಾರೆ. 3-4 ಹುದ್ದೆಗಳು ಖಾಲಿ ಇದೆ. ನಾನು ಆ ಕ್ಷೇತ್ರಕ್ಕೆ ಮುಖ ತೋರಿಸುವುದು ಹೇಗೆ? ಒಬ್ಬಬ್ಬರಾದರೂ ಅಲ್ಲಿರಬೇಕು, ಇಲ್ಲದಿದ್ದರೆ ಆಸ್ಪತ್ರೆ ನಡೆಯುವುದು ಹೇಗೆ? ನೀವು ನೇಮಕಾತಿ ಮಾಡಿಕೊಂಡು ಉದ್ಯೋಗ ಭರ್ತಿ ಮಾಡುವುದು ಬೇರೆ ವಿಷಯ. ತಕ್ಷಣಕ್ಕೆ ಆಸ್ಪತ್ರೆ ನಡೆಯಬೇಕಲ್ಲಾ. ಅದಕ್ಕೆ ಇಮ್ಮೀಡಿಯಟ್ ಆಗಿ ಒಂದು ರಿಲೀಫ್ ಸಿಗಬೇಕಲ್ಲ.

ಡಾ: ಎಚ್.ಸಿ.ಮಹದೇವಪ್ಪ: ಅವರ ಕ್ಷೇತ್ರದಲ್ಲಿ ಸಂಬಂಧಪಟ್ಟ ಹಾಗೆ ತೊಂದರೆ ಇದ್ದರೆ ನಾನು ಅವರನ್ನು ಕರೆದು ತಕ್ಷಣ ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳುತ್ತೇನೆ. ಈಗಾಗಲೇ ಇನ್ನು ಹತ್ತು-ಹದಿನೈದು ದಿನದಲ್ಲಿ 254 ಚಾಲಕರ ನೇಮಕಾತಿ ಆರ್ಡರ್ ಇಶ್ಯೂ ಮಾಡುತ್ತಿದ್ದೇನೆ. ಇನ್ನೂ ತುರ್ತು ಸಮಸ್ಯೆ ಇದ್ದರೆ ಅದನ್ನು ಬಗೆಹರಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಎನ್.ನಾರಾಯಣಸ್ವಾಮಿ: ಅದರ ಜೊತೆಗೆ ಒಂದು ವಿಷಯ ಮನವರಿಕೆ ಮಾಡಿಕೊಡುವುದಕ್ಕೆ ಇಷ್ಟಪಡುತ್ತೇನೆ. ಬಹುತೇಕವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಾಗೂ ಸಮುದಾಯ ಭವನದಲ್ಲಿ ಗ್ರಾಮೀಣ ಪ್ರದೇಶದ ಐ ಎನ್ ಎಂಗಳಿಗೆ ವಿಸಿಟ್ ಕೊಡಬೇಕು. ಡಾಕ್ಟರ್‌ಗಳನ್ನು ಕೊಡಬೇಕು, ಎಎನ್‌ಎಂಗಳಿಗೆ ವಿಸಿಟ್ ಕೊಡಬೇಕು. ಬಹುತೇಕವಾಗಿ ಚಾಲಕರು ಇದ್ದಾರೆ, ವಾಹನಗಳು ಇದೆ. ಆದರೆ ಗ್ರಾಮೀಣ ಮಟ್ಟದಲ್ಲಿ ಯಾವುದೇ ಡಾಕ್ಟರ್‌ಗಳು ಹೋಗುತ್ತಿಲ್ಲ. ಕೇವಲ ಹೆಲ್ತ್ ಸೆಂಟರ್‌ಗಳಲ್ಲಿ ಮತ್ತು ಸಮುದಾಯ ಭವನದ ಕೇಂದ್ರಗಳಲ್ಲಿ ಕುಳಿತುಕೊಂಡಿರುತ್ತಾರೆ. ಗ್ರಾಮೀಣ ಮಟ್ಟದಲ್ಲಿ ಹೋಗುವುದಕ್ಕೆ ಯಾವ ರೀತಿ ಸರ್ಕಾರ ಎಚ್ಚರಿಕೆಯನ್ನು ವಹಿಸಿದ್ದೀರಿ. ಅದಕ್ಕೋಸ್ಕರ ಎಲ್ಲಾ ಕೇಂದ್ರಗಳಲ್ಲಿ ವಾಹನಗಳು ಮತ್ತು ಚಾಲಕರು ಅವಶ್ಯಕತೆ ಇದೆ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

Dr. H.C.Mahadevappa: The concept pf Primary Health Centre and CHC is to provide Primary Health Care. ಅವೆಲ್ಲಾ ರೂರಲ್‌ನಲ್ಲಿರುವುದರಿಂದ ಮತ್ತು ಎಎನ್‌ಎಂ ಸಬ್ ಸೆಂಟರ್ಸ್‌ಗೆ ಡಾಕ್ಟರ್ ಒಮ್ಮೆ ಭೇಟಿ ಕೊಡಬೇಕು ಮತ್ತು ಅಲ್ಲಿರತಕ್ಕ ಜನರ ತಪಾಸಣೆ ಮಾಡಬೇಕು ಎಂದು ಇದೆ. ಅವರ ಕ್ಷೇತ್ರದಲ್ಲಿ ಅದಾಗದಿದ್ದರೆ ನಿರ್ದಿಷ್ಟವಾಗಿದ್ದರೆ ಅದಕ್ಕೆ ಕ್ರಮ ಕೈಗೊಂಡು ಅಲ್ಲಿಯೂ ಹೋಗಿ ತಪಾಸಣೆ ಮಾಡಲು ನಾನು ಸೂಚನೆ ಕೊಡುತ್ತೇನೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿ 1998-99ರಲ್ಲಿ ಕೈಗೊಂಡ ಗ್ರಾಮೀಣಾಭಿವೃದ್ಧಿ ಯೋಜನೆಗಳು.

589: (3541)

ಶ್ರೀ ಎನ್.ವೈ.ಗೋಪಾಲಕೃಷ್ಣ (ಮೊಳಕಾಲ್ಮೂರು): ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ 1998-99ರಲ್ಲಿ ಕೈಗೊಂಡಿರುವ ಗ್ರಾಮಾಣಾಭಿವೃದ್ಧಿ ಯೋಜನೆಗಳು ಯಾವುವು?

ಆ. ಇವುಗಳಿಗೆ ಸರ್ಕಾರ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು? ಹಾಗೂ 1998-99ರ ಅಂತ್ಯದೊಳಗೆ ಖರ್ಚು ಮಾಡಲಿರುವ ಹಣವೆಷ್ಟು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ. 1. ಐ.ಆರ್.ಡಿ.ಪಿ

2. ಟ್ರೈಸಂ

3. ಡ್ವಾಕಾ

4. ನಿರ್ಮಲ ಕರ್ನಾಟಕ ಯೋಜನೆ.

5. ಗ್ರಾಮೀಣ ನೀರು ಸರಬರಾಜು ಯೋಜನೆ

6. ಜೆ.ಆರ್.ವೈ. ಶೇ. 15

7. ಜೆ.ಆರ್.ವೈ. ಶೇ 15